# PM-KUSUM (Pradhan Mantri Kisan Urja Suraksha evam Uttan Mahaabhiyan), Component-B ಅಡಿಯಲ್ಲಿ ಜಾಲಮುಕ್ತ ಸೌರ ಚಾಲಿತ ಕೃಷಿ ಪಂಪ್‌ಸೆಟ್‌ಗಳನ್ನು ಅಳವಡಿಸುವ ಯೋಜನೆ

## ಮಾರ್ಗಸೂಚಿಗಳು ಹಾಗೂ ಪೂರಕ ಮಾಹಿತಿ

ಕೇಂದ್ರ ಸರ್ಕಾರದ PM-KUSUM (Pradhan Mantri Kisan Urja Suraksha evam Uttan Mahaabhiyan), Component-B ಯೋಜನೆಯಡಿಯಲ್ಲಿ ಜಾಲಮುಕ್ತ ಸೌರ ಚಾಲಿತ ಕೃಷಿ ಪಂಪ್‌ಸೆಟ್‌ಗಳನ್ನು ಅಳವಡಿಸುವ ಯೋಜನೆಯನ್ನು ಕ್ರೆಡಲ್ ಮೂಲಕ ರಾಜ್ಯ ವ್ಯಾಪ್ತಿಯಲ್ಲಿ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಸಹಯೋಗದೊಂದಿಗೆ ಕೈಗೊಳ್ಳಲಾಗಿದೆ. PM-KUSUM, Component-B ಯೋಜನೆಯಡಿಯಲ್ಲಿ ಪ್ರತಿ ಸೌರ ಪಂಪ್‌ಸೆಟ್‌ಗೆ ಶೇ. 30 ರಷ್ಟು ಕೇಂದ್ರ ಸಹಾಯ ಧನ, ಗರಿಷ್ಟ 7.5 ಹೆಚ್.ಪಿ ಸಾಮರ್ಥ್ಯದವರೆಗೆ ಒದಗಿಸಲಾಗುತ್ತಿದೆ. 10 ಹೆಚ್.ಪಿ ಸಾಮರ್ಥ್ಯದ ಸೌರ ಪಂಪ್‌ಸೆಟ್ ಅಳವಡಿಸಬಹುದಾಗಿರುತ್ತದೆ, ಆದರೆ, ಕೇಂದ್ರ ಸಹಾಯಧನ 7.5 ಹೆಚ್.ಪಿ ಸಾಮರ್ಥ್ಯದ ಸೌರ ಪಂಪ್‌ಸೆಟ್ ದರದ ಶೇ. 30ಕ್ಕೆ ಸೀಮಿತಗೊಳಿಸಲಾಗಿದೆ. ರಾಜ್ಯ ಸರ್ಕಾರದಿಂದ ಸಾಮಾನ್ಯ ವರ್ಗದ ಫಲಾನುಭವಿಗಳ ಕೊಳವೆ/ತೆರೆದ ಬಾವಿಗಳಿಗೆ ಸೌರ ಪಂಪ್‌ಸೆಟ್ ಒದಗಿಸಲು ಶೇ. 30 ರಷ್ಟು ಸಹಾಯಧನ ಒದಗಿಸಲಾಗುತ್ತಿದೆ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ರೈತ ಫಲಾನುಭವಿಗಳಿಗೆ ಶೇ. 50ರಷ್ಟು ಒದಗಿಸಲಾಗುತ್ತಿದೆ. ಉಳಿದ ಮೊತ್ತವನ್ನು, ರೈತ ಫಲಾನುಭವಿಗಳಿಂದ ವಂತಿಗೆಯಾಗಿ ಪಾವತಿಸಬೇಕಾಗಿರುತ್ತದೆ. (ಸಾಮಾನ್ಯ ವರ್ಗ : ಶೇ.40, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗ: ಶೇ.20). ಅರ್ಹ ರೈತರು ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸಿ ಯೋಜನೆಯ ಲಾಭವನ್ನು ಪಡೆಯಬಹುದಾಗಿದೆ.

ಈ ಕೆಳಗಿನ ಅಂಶಗಳನ್ನು ರೈತರು ಅರ್ಜಿ ಸಲ್ಲಿಸುವ ಮೊದಲು ಗಮನಿಸುವುದು:

1) ರೈತರ ಜಮೀನಿನಲ್ಲಿ ಬಾವಿಯನ್ನು ಕೊರೆಸಿ ಸಿದ್ದವಿರಬೇಕು.
2) ಹೊಸ ಕೃಷಿ ಪಂಪ್‌ಸೆಟ್‌ಗಳಿಗೆ ಮಾತ್ರ ಯೋಜನೆಯು ಅನ್ವಯಿಸುತ್ತದೆ (ಹಾಲಿ ವಿದ್ಯುತ್ ಸಂಪರ್ಕವನ್ನು ಹೊಂದಿರುವ ಪಂಪ್‌ಸೆಟ್‌ಗಳು ಅರ್ಹವಿರುವುದಿಲ್ಲ).
3) ಎಂ.ಎನ್.ಆರ್.ಇ ಮಾನದಂಡಗಳ ಪ್ರಕಾರ ಪಂಪುಗಳ ನೀರೆತ್ತುವ ಆಳ ಮೀಟರ್‌ಗಳಲ್ಲಿ (Total head in mts) : 3 ಹೆಚ್.ಪಿ-20 ಮಿ., 5 ಹೆಚ್.ಪಿ-70 ಮಿ., 7.5 ಹೆಚ್.ಪಿ-100 ಮಿ., 10 ಹೆಚ್.ಪಿ-100 ಮಿ.,
4) ಈಗಾಗಲೇ ಗಂಗಾಕಲ್ಯಾಣ ಯೋಜನೆಯಡಿ ಲಾಭವನ್ನು ಪಡೆದಿರುವ ಹಾಗೂ ಪಡೆಯಲು ಪ್ರಕ್ರಿಯೆಯಲ್ಲಿರುವ ಫಲಾನುಭವಿಗಳು ಸದರಿ ಯೋಜನೆಯ ಲಾಭವನ್ನು ಪಡೆಯಲು ಅರ್ಹರಿರುವುದಿಲ್ಲ.
5) PM-KUSUM, Component-B ಮಾರ್ಗಸೂಚಿಗಳನ್ವಯ Dark Zone ಎಂದು ಘೋಷಿಸಿರುವ ಪ್ರದೇಶಗಳಲ್ಲಿ ಸದರಿ ಯೋಜನೆಯ ಲಾಭವನ್ನು ಪಡೆಯಲು ಅರ್ಜಿದಾರರು ಅರ್ಹರಿರುವುದಿಲ್ಲ.
6) ಅರ್ಜಿದಾರರು ಕೇವಲ ಒಂದು ಸೌರ ಪಂಪ್‌ಸೆಟ್‌ಗಾಗಿ ಅರ್ಜಿ ಸಲ್ಲಿಸುವುದು. ಈಗಾಗಲೇ ಇತರೆ ಅನುದಾನಿತ ಸರ್ಕಾರಿ ಪ್ರಾಯೋಜಿತ ಯೋಜನೆಗಳಡಿ ಸೌರ ಪಂಪ್‌ಸೆಟ್ ಪಡೆದಿದ್ದರೆ, ಅಂತಹ ಅರ್ಜಿದಾರರು ಅರ್ಹರಿರುವುದಿಲ್ಲ.
7) ಅರ್ಜಿದಾರರು ಅವರ ವಂತಿಗೆಯನ್ನು ಡಿ.ಡಿ ಮೂಲಕವೇ ಸಲ್ಲಿಸುವುದು. Cheque ಅಥವಾ ಇತರೆ ಆನ್‌ಲೈನ್ payment ಮೂಲಕ ಅರ್ಜಿದಾರರ ವಂತಿಗೆ ಹಣ ಸ್ವೀಕರಿಸಲಾಗುವುದಿಲ್ಲ.

8) “ಮೊದಲು ಬಂದವರಿಗೆ ಮೊದಲ ಆದ್ಯತೆಯ” ಮೇರೆಗೆ ಫಲಾನುಭವಿಗಳಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ ನೊಂದಾಯಿಸಿಕೊಳ್ಳಲಾಗುವುದು.

9) ಎಲ್ಲಾ ವರ್ಗದ ಅರ್ಜಿಗಳಲ್ಲಿ ವಿಶೇಷ ಚೇತನರಿಗೆ ಶೇ.5 ರಷ್ಟು ಮೀಸಲಾತಿ ಒದಗಿಸಲಾಗುತ್ತಿದೆ. ಸಾಮಾನ್ಯ ಹಾಗೂ ಪ.ಜಾ/ಪ.ಪಂ ವರ್ಗದಲ್ಲಿ ಸೂಚಿಸಲಾಗಿರುವ ವಂತಿಗೆ ಮೊತ್ತವನ್ನು ಆಯಾ ವರ್ಗದ ವಿಶೇಷ ಚೇತನ ಅರ್ಜಿದಾರರು ನಮೂದಿಸಿದ ವಂತಿಗೆಯನ್ನು ಪಾವತಿಸುವುದು.

ಪ್ರತಿ ಸೌರ ಪಂಪ್‌ಸೆಟ್‌ನ ಟೆಂಡರ್ ಉಲ್ಲೇಖಿತ ದರ ಹಾಗೂ ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಒದಗಿಸಲಾಗುತ್ತಿರುವ ಸಹಾಯಧನದ ವಿವರಗಳು ಮತ್ತು ಅರ್ಜಿದಾರರು ಪಾವತಿಸಬೇಕಾಗಿರುವ ವಂತಿಗೆ ವಿವರಗಳು (Table-1):

| ಸೌರ ಪಂಪ್ ಸೆಟ್ ಸಾಮರ್ಥ್ಯ | ಬಾವಿಯ ಮಾದರಿ | ಟೆಂಡರ್ ದರ ಪ್ರತಿ ಸೌರ ಪಂಪ್‌ಸೆಟ್‌ಗೆ ರೂ. ಗಳಲ್ಲಿ (GST ಸೇರಿದಂತೆ) | ಎಂ.ಎನ್. ಆರ್.ಇ ನಿಗದಿತ ನೀರೆತ್ತುವ ಆಳ (ಪಂಪ್ ಸೆಟ್ dynamic head) in meters | ಕೇಂದ್ರ ಸರ್ಕಾರದ ಸಹಾಯಧನ (ಶೇ.30) ರೂ. ಗಳಲ್ಲಿ | ರಾಜ್ಯ ಸರ್ಕಾರದ ಸಹಾಯಧನ ರೂ. ಗಳಲ್ಲಿ | | ಅರ್ಜಿ ದಾರರು ಪಾವತಿಸಬೇಕಾಗಿರುವ ವಂತಿಗೆ ರೂ.ಗಳಲ್ಲಿ | |
|---|---|---|---|---|---|---|---|---|
| | | | | | ಸಾಮಾನ್ಯ ವರ್ಗ (ಶೇ.30) | ಪ.ಜಾ/ ಪ.ಪಂ (ಶೇ.50) | ಸಾಮಾನ್ಯ ವರ್ಗ (ಶೇ.40) | ಪ.ಜಾ/ ಪ.ಪಂ (ಶೇ.20) |
| 3 ಹೆಚ್.ಪಿ | ತೆರೆದ | 178552 | 20 | 53565 | 53565 | 89276 | 71422 | 35711 |
| 5 ಹೆಚ್.ಪಿ | ಕೊಳವೆ | 252636 | 70 | 75790 | 75790 | 126318 | 101056 | 50528 |
| 7.5 ಹೆಚ್.ಪಿ | ಕೊಳವೆ | 364274 | 100 | 109282 | 109282 | 182136 | 145710 | 72856 |
| 10 ಹೆಚ್.ಪಿ | ಕೊಳವೆ | 468856 | 100 | 109282 | 109282 | 182136 | 250292 | 177438 |

ಪ್ರಸ್ತುತ ಸ್ವೀಕರಿಸಲಾಗುತ್ತಿರುವ ಅರ್ಜಿಗಳ ಸಂಖ್ಯೆ ಈ ಕೆಳಗಿನಂತಿವೆ (Table-2):

| ಸೌರ ಪಂಪ್ ಸೆಟ್ ಸಾಮರ್ಥ್ಯ | ಬಾವಿಯ ಮಾದರಿ | ಸಾಮಾನ್ಯ ವರ್ಗ | ಸಾಮಾನ್ಯ ವರ್ಗದಡಿ ವಿಶೇಷ ಚೇತನ ಅರ್ಜಿಗಳು | ಪ.ಜಾತಿ ವರ್ಗದ ಅರ್ಜಿಗಳು | ಪ.ಜಾತಿ ವರ್ಗದಡಿ ವಿಶೇಷ ಚೇತನ ಅರ್ಜಿಗಳು | ಪ.ಪಂಗಡ ವರ್ಗದ ಅರ್ಜಿಗಳು | ಪ.ಪಂಗಡ ವರ್ಗದಡಿ ವಿಶೇಷ ಚೇತನ ಅರ್ಜಿಗಳು | ಒಟ್ಟು ಅರ್ಜಿಗಳು |
|---|---|---|---|---|---|---|---|---|
| 3 ಹೆಚ್.ಪಿ | ತೆರೆದ | 52 | 3 | 12 | 1 | 4 | 1 | 73 |
| 5 ಹೆಚ್.ಪಿ | ಕೊಳವೆ | 397 | 21 | 90 | 5 | 36 | 2 | 551 |
| 7.5 ಹೆಚ್.ಪಿ | ಕೊಳವೆ | 2308 | 121 | 522 | 27 | 211 | 11 | 3200 |
| 10 ಹೆಚ್.ಪಿ | ಕೊಳವೆ | 432 | 23 | 98 | 5 | 40 | 2 | 600 |
| ಒಟ್ಟು | | 3189 | 168 | 722 | 38 | 291 | 16 | 4424 |

ದೋಷಪೂರಿತ ಹಾಗೂ ತಪ್ಪು ಮಾಹಿತಿ ಸಲ್ಲಿಸಿ ತಿರಸ್ಕೃತಗೊಳ್ಳುವ ಅರ್ಜಿಗಳನ್ನು ಗಮನದಲ್ಲಿರಿಸಿ, ಹೆಚ್ಚುವರಿ ಶೇ. 10 ಅರ್ಜಿಗಳನ್ನು ಸ್ವೀಕರಿಸಲಾಗುವುದು. ವರ್ಗವಾರು ನೀಡಲಾಗಿರುವ ಉದ್ದೇಶಿತ ಗರಿಷ್ಠ ಅರ್ಜಿಗಳ ಸಂಖ್ಯೆ ತಲುಪಿದ ನಂತರ ಅರ್ಜಿನೊಂದಾವಣಿ ಪ್ರಕ್ರಿಯೆಯು ಮುಕ್ತಾಯಗೊಳ್ಳುವುದು. ಆಯಾ ಸೌರ ಪಂಪ್‌ಸೆಟ್ ಸಾಮರ್ಥ್ಯದಡಿ ಕನಿಷ್ಠ 50 ಅರ್ಜಿಗಳು ಸ್ವೀಕೃತಗೊಳ್ಳದಿದ್ದಲ್ಲಿ ಹಾಗೂ ತಾಂತ್ರಿಕ/ಇತರೆ ಕಾರಣಗಳಿಂದಾಗಿ ಅನುಷ್ಠಾನಗೊಳಿಸಲು ಕಷ್ಟಸಾಧ್ಯವಾದಲ್ಲಿ, ಅರ್ಜಿದಾರರ ವಂತಿಗೆ ಹಣವನ್ನು ಬಡ್ಡಿರಹಿತವಾಗಿ ಹಿಂದಿರುಗಿಸಲಾಗುವುದು.

**ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸಲು ಒದಗಿಸಬೇಕಾದ ಅಗತ್ಯ ಮಾಹಿತಿಗಳು:**

ಅ) ಭೂ ಮಾಲಿಕತ್ವವುಳ್ಳ ಅರ್ಜಿದಾರರ ಹೆಸರು

ಆ) ವಾಸಸ್ಥಳ ಮತ್ತು ವಿಳಾಸ: ಗ್ರಾಮ, ತಾಲ್ಲೂಕು, ಜಿಲ್ಲೆ

ಇ) ಆಧಾರ್ ಸಂಖ್ಯೆ

ಈ) ದೂರವಾಣಿ ಸಂಖ್ಯೆ

ಉ) ಭೂ ದಾಖಲೆಗಳ ವಿವರಗಳು: ಆರ್.ಟಿ.ಸಿ, ಸರ್ವೆ ನಂ., ಗ್ರಾಮ, ತಾಲ್ಲೂಕು, ಹೊಬಳಿ, ಗ್ರಾಮಪಂಚಾಯತಿ, ಜಿಲ್ಲೆ

ಊ) ವಂತಿಗೆ ವಿವರ: ಡಿ.ಡಿ. ಸಂಖ್ಯೆ ಹಾಗೂ ದಿನಾಂಕ (ಕೋಷ್ಟಕದಲ್ಲಿ ನಮೂದಿಸಿದಂತೆ ಸೌರ ಪಂಪ್‌ಸೆಟ್ ಸಾಮರ್ಥ್ಯಕ್ಕೆ ಅನುಗುಣವಾಗಿ ಡಿ.ಡಿ ಯನ್ನು MD KREDL ರವರ ಹೆಸರಿಗೆ payable at Bengaluru ಪಡೆಯುವುದು

ಋ) ಅರ್ಜಿದಾರರ ಬ್ಯಾಂಕ್ ಖಾತೆ ವಿವರ: ಅರ್ಜಿದಾರರ ಹೆಸರು, ಬ್ಯಾಂಕ್ ಹೆಸರು, ಬ್ಯಾಂಕ್ ಶಾಖೆ ಹೆಸರು, ಖಾತೆಯ ಸಂಖ್ಯೆ, ಐ.ಎಫ್.ಎಸ್.ಸಿ ಕೋಡ್, ಖಾತೆಯ ಮಾದರಿ

ಎ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದವರು ಜಾತಿ ಪ್ರಮಾಣ ಪತ್ರದ ವಿವರಗಳು: ಆರ್.ಡಿ. ಸಂಖ್ಯೆ

ಐ) ರೇಷನ್ ಕಾರ್ಡ್ ವಿವರಗಳು: ಕಾರ್ಡ್ ಸಂಖ್ಯೆ, ಎ.ಪಿ.ಎಲ್/ಬಿ.ಪಿ.ಎಲ್.

ಒ) ವಿಶೇಷ ಚೇತನ ಅನ್ವಯಿಸಿದಲ್ಲಿ , Unique Disability ID ಪ್ರತಿ ಅಥವಾ District Disabled Welfare Officer ರವರಿಂದ ನೀಡಲಾದ Disability Certificate ದಾಖಲೆ ಪ್ರತಿ.

# ಆನ್ ಲೈನ್ ಅರ್ಜಿಗಳನ್ನು ಸಲ್ಲಿಸಲು ಪೂರಕ ಮಾಹಿತಿ

ಅರ್ಜಿದಾರರ ಆನ್‌ಲೈನ್ ನೋಂದಾವಣೆಗೆ ಸಂಬಂಧಿಸಿದಂತೆ, ಅರ್ಜಿದಾರರು ತಮ್ಮ ವಾಸಸ್ಥಳ, ಹಾಲಿ ಜಮೀನಿನ ವಿವರ, ವರ್ಗ, ವಂತಿಗೆಯ ವಿವರ, ಜಾತಿ ಪ್ರಮಾಣ ಪತ್ರದ ವಿವರಗಳನ್ನು ಅನ್ವಯಿಸಿದಲ್ಲಿ, ನಮೂನೆಯಲ್ಲಿ ತಿಳಿಸಿರುವಂತೆ ಸಲ್ಲಿಸಬೇಕಾಗಿರುತ್ತದೆ. ತದನಂತರ ಮುದ್ರಿತ ಸ್ವೀಕೃತಿ ಪ್ರತಿಯೊಂದಿಗೆ (acknowledgment copy), ಇತ್ತೀಚಿನ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಮತ್ತು ನಿಗಧಿಪಡಿಸಲಾದ ವಂತಿಗೆಯನ್ನು ಮೂಲ ಡಿ.ಡಿ ಹಾಗೂ ಆಧಾರ್ ಪ್ರತಿ, RTC , ಜಾತಿ ಪ್ರಮಾಣ ಪತ್ರ, ರೇಷನ್ ಕಾರ್ಡ ಪ್ರತಿ (ಪ.ಜಾ/ಪ.ಪಂ ವರ್ಗದವರಿಗೆ), ವಿಶೇಷ ಚೇತನ Unique Disability ID ಪ್ರತಿ ಅಥವಾ District Disabled Welfare Officer ರವರಿಂದ ನೀಡಲಾದ Disablility Certificate ಅನ್ವಯಿಸಿದಲ್ಲಿ ದಾಖಲೆ ಪ್ರತಿಯನ್ನು (ಎರಡು ಸೆಟ್) ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯ ಕಾರ್ಯ ಮತ್ತು ಪಾಲನಾ ಉಪವಿಭಾಗ ಕಛೇರಿಗೆ ಸಲ್ಲಿಸಬೇಕಾಗಿರುತ್ತದೆ.

**ಫಲಾನುಭವಿಗಳು ಆನ್‌ಲೈನ್ ನೋಂದಾವಣೆಗೆ ಸಂಬಂಧಿಸಿದಂತೆ, ಅರ್ಜಿ ನಮೂನೆ:**

**(I)** **(a) ಜಾತಿ ವರ್ಗ*:** ವರ್ಗದ ಆಯ್ಕೆಯ ಸ್ಥಳದಲ್ಲಿ ಅರ್ಜಿದಾರರು, ಸಾಮಾನ್ಯ/ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಆಯಾ ವರ್ಗವನ್ನು ಆಯ್ಕೆ ಮಾಡುವುದು. ವಿಶೇಷ ಚೇತನ ದಡಿಯಲ್ಲಿ ಅರ್ಜಿ ಸಲ್ಲಿಸಲು ಆಯಾ ವರ್ಗವನ್ನು ಆಯ್ಕೆ ಮಾಡುವುದು.

**(b) ಸಾಮರ್ಥ್ಯ*:** ಅರ್ಜಿದಾರರು 3 ಹೆಚ.ಪಿ/5 ಹೆಚ.ಪಿ/7.5 ಹೆಚ.ಪಿ/10 ಹೆಚ.ಪಿ ಸೌರ ಪಂಪ್ ಸೆಟ್ ಗೆ ಆಯ್ಕೆ ಮಾಡುವುದು.

**(II)** **ಬಾವಿಯ ವಿದ್ಯುದ್ದೀಕರಣ*:** ಬಾವಿಯು ಈಗಾಗಲೇ ವಿದ್ಯುದೀಕರಣಗೊಂಡಿದ್ದರೆ **Yes** ಎಂದು ಆಯ್ಕೆ ಮಾಡುವುದು, ವಿದ್ಯುದೀಕರಣಗೊಳ್ಳದಿದ್ದರೆ **No** ಎಂದು ಆಯ್ಕೆ ಮಾಡುವುದು

**(III)** **ಸರ್ಕಾರಿ ಅನುದಾನಿತ ಯೋಜನೆಗಳಡಿ ಸೌರ ಪಂಪ್‌ಸೆಟ್ ಪಡೆದಿರುವ ಬಗ್ಗೆ*:** ಈಗಾಗಲೇ ಅರ್ಜಿದಾರರು ಸರ್ಕಾರಿ ಅನುದಾನಿತ ಯೋಜನೆಗಳಡಿ ಸೌರ ಪಂಪ್‌ಸೆಟ್ ಪಡೆಡಿದ್ದರೆ, **Yes** ಎಂದು ಆಯ್ಕೆ ಮಾಡುವುದು, ಇಲ್ಲದಿದ್ದಲ್ಲಿ **No** ಎಂದು ಆಯ್ಕೆ ಮಾಡುವುದು.

**(IV)** **ಅರ್ಜಿದಾರರು ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಫಲಾನುಭವಿಯೇ?*:** ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಬಾವಿಯು ವಿದ್ಯುದ್ದೀಕರಣ ಗೊಂಡಿದಲ್ಲಿ ಅಥವಾ ಪ್ರಕ್ರಿಯೆಯಲ್ಲಿದ್ದಲ್ಲಿ **Yes** ಎಂದು ಆಯ್ಕೆ ಮಾಡಿ, ಇಲ್ಲವಾದರೇ **No** ಎಂದು ಆಯ್ಕೆ ಮಾಡುವುದು.

1. **ಅರ್ಜಿದಾರರ ಹೆಸರು ಮತ್ತು ಸಂಪರ್ಕ ವಿವರಗಳು:**

**(ಅ) ಅರ್ಜಿದಾರರ ಹೆಸರು*:** ಅರ್ಜಿದಾರರ ಹೆಸರನ್ನು ಆಧಾರ್ ಕಾರ್ಡನಲ್ಲಿರುವಂತೆ ನಮೂದಿಸುವುದು.

**(ಆ) ವಯಸ್ಸು*:**

**(ಇ) ಲಿಂಗ *:**

**(ಈ) ತಂದೆ/ಗಂಡನ ಹೆಸರು*:** ಅರ್ಜಿದಾರರ ತಂದೆ/ಗಂಡನ ಹೆಸರನ್ನು ನಮೂದಿಸುವುದು.

**(ಉ) ದೂರವಾಣಿ ಸಂಖ್ಯೆ*:** ಆಧಾರ್ ಕಾರ್ಡ್‌ಗೆ ಲಿಂಕ್ ಆಗಿರುವ ದೂರವಾಣಿ ಸಂಖ್ಯೆ ನಮೂದಿಸುವುದು.

**(ಊ) ಆಧಾರ್ ಕಾರ್ಡ ಸಂಖ್ಯೆ*:** ಅರ್ಜಿದಾರರ ಆಧಾರ್ ಕಾರ್ಡ ಸಂಖ್ಯೆಯನ್ನು ನಮೂದಿಸುವುದು

2. **ಅರ್ಜಿದಾರರ ವಾಸಸ್ಥಳದ ವಿವರಗಳು:**
   **(ಅ) ವಿಳಾಸ*:** ಅರ್ಜಿದಾರರ ವಾಸಸ್ಥಳ ವಿಳಾಸ ನಮೂದಿಸುವ ಸ್ಥಳದಲ್ಲಿ ಪತ್ರ ವ್ಯವಹಾರಕ್ಕಾಗಿ ವಿಳಾಸವನ್ನು ಭರ್ತಿ ಮಾಡುವುದು.
   **(ಆ) ಗ್ರಾಮದ ಹೆಸರು *:**
   **(ಇ) ತಾಲ್ಲೂಕು*:**
   **(ಈ) ಜಿಲ್ಲೆ*:**

3. **ಅರ್ಜಿದಾರರ ಜಮೀನಿನ ವಿವರಗಳು:**
   **(ಅ) ಗ್ರಾಮದ ಹೆಸರು*:**
   **(ಆ) ಗ್ರಾಮ ಪಂಚಾಯತಿ*:**
   **(ಇ) ಹೊಬಳಿ*:**
   **(ಈ) ತಾಲ್ಲೂಕು*:**
   **(ಉ) ಜಿಲ್ಲೆ*:**
   **(ಊ) ಸರ್ವೆ ನಂಬರ್*:** ಗೇಣಿ ಮತ್ತು ಪಹಣಿ ಪತ್ರ (RTC) ದಲ್ಲಿರುವಂತೆ ಸರ್ವೆ ನಂಬರ್ ನಮೂದಿಸುವುದು
   **(ಋ) ಆರ್.ಟಿ.ಸಿ ನಲ್ಲಿರುವ ಕಾಲಂ 9 ರಂತೆ ಜಮೀನಿನ ಮಾಲೀಕರ ಹೆಸರು *:**
   **(ಎ) ಬಾವಿಯ ಒಟ್ಟಾರೆ ಆಳ :** ಅಡಿಗಳಲ್ಲಿ ನಮೂದಿಸುವುದು

**4(ಅ) ಅರ್ಜಿದಾರರು ಪಾವತಿಸಬೇಕಾದ ವಂತಿಗೆ ವಿವರಗಳು:**

ಆಯ್ಕೆ ಮಾಡಲಾದ ಸೌರ ಪಂಪ್‌ಸೆಟ್ ಸಾಮರ್ಥ್ಯಕ್ಕೆ ಅನುಗುಣವಾಗಿ Table-1 ರಲ್ಲಿ ಸೂಚಿಸಿದಂತೆ ಫಲಾನುಭವಿಗಳು ವಂತಿಗೆಯನ್ನು ಡಿ.ಡಿ.ಮೂಲಕವೇ ಪಾವತಿಸಬೇಕಾಗಿರುತ್ತದೆ.( ಡಿ.ಡಿ ಯನ್ನು **MD, KREDL** ರವರ ಹೆಸರಿಗೆ **payable at Bengaluru** ಪಡೆಯುವುದು)
ಅರ್ಜಿದಾರರು ಆನ್ ಲೈನ್ ಅರ್ಜಿ ಸಲ್ಲಿಸುವ ಮುನ್ನ ಉದ್ದೇಶಿತ ಸೌರ ಪಂಪ್‌ಸೆಟ್ ಸಾಮರ್ಥ್ಯದ ಅನುಸಾರ ಡಿ.ಡಿ. ಪಡೆಯುವುದು.
ಆನ್‌ಲೈನ್ ಅರ್ಜಿಯಲ್ಲಿ ಈ ಕೆಳಕಂಡ ವಿವರಗಳನ್ನು ಸಲ್ಲಿಸುವುದು:
**(ಅ) ಡಿ.ಡಿ. ಸಂಖ್ಯೆ*:**
**(ಆ) ಡಿ.ಡಿ. ದಿನಾಂಕ*:**
**(ಇ) ಬ್ಯಾಂಕ್ ಹೆಸರು*:**

**4(ಬಿ) ಅರ್ಜಿದಾರರ ಬ್ಯಾಂಕ ಖಾತೆ ವಿವರಗಳು:**

ಟಿಪ್ಪಣಿ: ಅರ್ಜಿಯಲ್ಲಿನ ದೋಷಗಳು, ತಪ್ಪು ಮಾಹಿತಿ, ಇದರಿಂದ ತಿರಸ್ಕೃತಗೊಳ್ಳುವ ಅರ್ಜಿಗಳನ್ನು ಗಮನದಲ್ಲಿರಿಸಿ, ಹೆಚ್ಚುವರಿ ಅರ್ಜಿಗಳನ್ನು ಸ್ವೀಕರಿಸಲಾಗುವುದು. ಕೆ.ಆರ್.ಇ.ಡಿ.ಎಲ್ ವತಿಯಿಂದ ಅರ್ಜಿದಾರರ ವಂತಿಗೆಯನ್ನು ಹಿಂದಿರುಗಿಸುವ ಸಂದರ್ಭಗಳು ಉದ್ಭವಿಸುವುದರಿಂದ ಅರ್ಜಿದಾರರ ಬ್ಯಾಂಕ್ ಖಾತೆ ವಿವರಗಳನ್ನು ಪಡೆಯಲಾಗುತ್ತಿದೆ.

**(i) ಅರ್ಜಿದಾರರ ಹೆಸರು* :**
**(ii) ಖಾತೆ ಸಂಖ್ಯೆ* :**

**(iii) ಬ್ಯಾಂಕ್ ಹೆಸರು* :**

**(iv) ಬ್ಯಾಂಕ್ ಶಾಖೆ* :**

**(v) ಐ.ಎಫ್.ಎಸ್.ಸಿ ಕೋಡ್*** :

**(vi) ಖಾತೆ ಮಾದರಿ (savings/current/OD)* :**

**5. ಪರಿಶಿಷ್ಠ ಜಾತಿ/ಪಂಗಡ ಪ್ರಮಾಣ ಪತ್ರ ವಿವರಗಳು**: (ಅನ್ವಯಿಸಿದ್ದಲ್ಲಿ)

**i) ಆರ್ ಡಿ ಸಂಖ್ಯೆ*:**

**6. ಪಡಿತರ ಚೀಟಿ ವಿವರ*:**

**i) APL/BPL* :** ಆಯ್ಕೆ ಮಾಡುವುದು

**ii) ಪಡಿತರ ಚೀಟಿ ಸಂಖ್ಯೆ***:

**(* ಸೂಚನೆಯು ಕಡ್ಡಾಯವಾಗಿ ನಮೂದಿಸಬೇಕಾಗಿರುವ ಮಾಹಿತಿಯಾಗಿರುತ್ತದೆ.)**

**ಆನ್‌ಲೈನ್ ಮುಖಾಂತರ ಅರ್ಜಿ ನೋಂದಾಯಿಸಿಕೊಂಡ ನಂತರದ ಪ್ರಕ್ರಿಯೆ:**

ಆನ್‌ಲೈನ್ ನಲ್ಲಿ ಅರ್ಜಿ ನೊಂದಾಯಿಸಿಕೊಂಡ ನಂತರ, ಪಡೆದ ಸ್ವೀಕೃತಿ ಪ್ರತಿಯಲ್ಲಿ (acknowledgement copy) ಸಹಿ ಮಾಡಿ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ನಿಗಧಿತ ಸ್ಥಳದಲ್ಲಿ ಅಂಟಿಸಿ ಸಹಿಮಾಡುವುದು. ಮೂಲ ಡಿ.ಡಿ, ಆಧಾರ್ ಕಾರ್ಡ್ ಪ್ರತಿ, ಆರ್.ಟಿ.ಸಿ ಪ್ರತಿ, ಪಾಸ್‌ಪೋರ್ಟ್ ಅಳತೆಯ ಎರಡು ಭಾವಚಿತ್ರ, ಜಾತಿ ಪ್ರಮಾಣ ಪತ್ರದ ಪ್ರತಿ, ರೇಷನ್ ಕಾರ್ಡ ಪ್ರತಿ ಈ ಎಲ್ಲಾ ದಾಖಲೆಗಳ ಎರಡು ಸೆಟ್ ಸ್ವಯಂ ದೃಢೀಕರಿಸಿದ ಪ್ರತಿಯನ್ನು(hard copy) ಪರಿಶೀಲನೆಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ದಿನಾಂಕದಿಂದ ಐದು ದಿನಗಳೊಳಗಾಗಿ ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯ ಉಪ-ವಿಭಾಗೀಯ ಕಛೇರಿಗಳಿಗೆ ಸಲ್ಲಿಸಿ ಸ್ವೀಕೃತಿ ಪಡೆದುಕೊಳ್ಳುವುದು. ವಿಳಂಭವಾದಲ್ಲಿ, ಜೇಷ್ಠತಾ ಪಟ್ಟಿಯಂತೆ ಮುಂದಿನ ಅರ್ಜಿದಾರರನ್ನು ಆಯ್ಕೆಗೆ ಪರಿಗಣಿಸಲಾಗುವುದು.

**ಸೂಚನೆ:**

1. ಆನ್‌ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸಂಭವಿಸಬಹುದಾದ network/connectivity ಗೆ ಸಂಬಂಧಿಸಿದ ತಾಂತ್ರಿಕ ತೊಂದರೆಗಳಿಗೆ ಕೆ.ಆರ್.ಇ.ಡಿ.ಎಲ್ ಜವಾಬ್ದಾರರಾಗಿರುವುದಿಲ್ಲ.
2. ಅರ್ಜಿಯಲ್ಲಿ ಸಲ್ಲಿಸಿರುವ ಮಾಹಿತಿಗಳಾದ ಮೂಲ ಡಿ.ಡಿ, ಆರ್.ಟಿ.ಸಿ, ಆಧಾರ್ ಕಾರ್ಡ ಸಂಖ್ಯೆ, ಜಾತಿ ಪ್ರಮಾಣ ಪತ್ರದ ಹಾಗೂ ರೇಷನ್ ಕಾರ್ಡ ಪ್ರತಿ ತಾಳೆಯಾಗಬೇಕು. ತಾಳೆಯಾಗದಿದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
3. ಕಛೇರಿ ವೇಳೆಯಲ್ಲಿ ಕೆ.ಆರ್.ಇ.ಡಿ.ಎಲ್ ಸಂಸ್ಥೆಯನ್ನು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ: 8095132100

## “ವಿಶೇಷ ಸೂಚನೆ”:

PM-KUSUM (Pradhan Mantri Kisan Urja Suraksha evam Uttan Mahaabhiyan) ಯೋಜನೆ ಹೆಸರಿನಲ್ಲಿ ನಕಲಿ ಜಾಲತಾಣಗಳು (FAKE websites) ಮುಖಾಂತರ ರೈತರನ್ನು ಮೋಸಗೊಳಿಸುತ್ತಿರುವುದು ವ್ಯಾಪಕವಾಗಿರುವ ಪ್ರಯುಕ್ತ ಎಂ.ಎನ್.ಆರ್.ಇ (ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ) ಹಾಗೂ ಕೆ.ಆರ್.ಇ.ಡಿ.ಎಲ್ ಸಂಸ್ಥೆಯು ಜನಸಾಮಾನ್ಯರಿಗೆ ಜಾಹಿರಾತುಗಳ ಮೂಲಕ ಮೋಸಹೋಗದಿರಲು ತಿಳುವಳಿಕೆ ನೀಡಲಾಗಿರುತ್ತದೆ. ಆದರೂ ಸಹ ರೈತರು ಮೋಸಹೋದ ಪಕ್ಷದಲ್ಲಿ https://cybercrime.gov.in ನಲ್ಲಿ ದೂರು ನೊಂದಾಯಿಸಿಕೊಳ್ಳುವುದು. ಇಂಥಹ ಪ್ರಕರಣಗಳಿಗೆ ಕೆ.ಆರ್.ಇ.ಡಿ.ಎಲ್ ಸಂಸ್ಥೆಯು ಜವಾಬ್ದಾರಾಗಿರುವುದಿಲ್ಲ.

**ಕರ್ನಾಟಕ ನವೀಕರಿಸಬಹುದಾದ ಅಭಿವೃದ್ಧಿ ನಿಗಮ ನಿಯಮಿತದ (ಕೆ.ಆರ್.ಇ.ಡಿ.ಎಲ್) ಅಧಿಕೃತ ಜಾಲತಾಣ www.kredl.karnataka.gov.in ದಲ್ಲಿ ಲಭ್ಯವಾಗುವ ಲಿಂಕ್ ಮೂಲಕ ಮಾತ್ರ PM-KUSUM, Component–B ಯೋಜನೆಯಡಿ ಆನ್ ಲೈನ್ ಅರ್ಜಿ ನೊಂದಾಯಿಸುಕೊಳ್ಳಲು ಸೂಚಿಸಿದೆ.**

*******